<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಹುಣಸೂರು.</u>

**ಸಿ.ಸಿ. ಸಂಖ್ಯೆಃ 391/2021**

**ಸಾಕ್ಷಿಯನ್ನು ದಿಃ 05.08.2024 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಜಗದೀಶ ಟಿ. | ಸಿ.ಡಬ್ಲ್ಯೂಃ **9** | ಪಿ.ಡಬ್ಲ್ಯೂಃ **7** |
| ತಂದೆಯ ಹೆಸರು | ಲೇಟ್ ತಿಮ್ಮೇಗೌಡ | | |
| ವಯಸ್ಸು | 50 ವರ್ಷ | | |
| ಕೆಲಸ | ಹೆಚ್ ಸಿ-196,<br>ಹೆಚ್.ಡಿ.ಕೋಟೆ ಠಾಣೆ | | |
| ವಾಸಸ್ಥಳ | ಹುಣಸೂರು | | |

<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>

1. ನಾನು ಮಾರ್ಚ್-2016 ರಿಂದ ಜುಲೈ-2022 ರ ವರೆಗೆ ನಾನು ಹುಣಸೂರು ಪಟ್ಟಣ ಠಾಣೆಯಲ್ಲಿ ಪಿ.ಸಿ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 27.12.2020 ರಂದು ರಾತ್ರಿ ಸುಮಾರು 7.30 ರ ಸಮಯದಲ್ಲಿ ಹುಣಸೂರು ಸರಕಾರಿ ಆಸ್ಪತ್ರೆಯಿಂದ ಚಾಸಾ-1 ರವರ MLC ವರದಿಯನ್ನು ನಮ್ಮ ಠಾಣೆಗೆ ಕಳುಹಿಸಿದ್ದು, ಸದರಿ ವರದಿಯ ಆಧಾರದ ಮೇಲೆ ದಿಃ 29.12.2020 ರಂದು ಮಧ್ಯಾಹ್ನ 2.10 ರಿಂದ 2.45 ರವರೆಗೆ ಚಾಸಾ-1 ರವರ ಹೇಳಿಕೆಯನ್ನು ಹುಣಸೂರು ಸರಕಾರಿ ಆಸ್ಪತ್ರೆಯಲ್ಲಿ ಪಡೆದು ವಾಪಸ್ಸು ಠಾಣೆಗೆ ಮಧ್ಯಾಹ್ನ 2.55 ಗಂಟೆಗೆ ಬಂದು ಮೊ.ಸಂ.206/2022 ರಂತೆ ಮೊಕದ್ದಮೆ ದಾಖಲಿಸಿಕೊಂಡಿರುತ್ತೇನೆ.

ಸದರಿ ನಿಪಿ.6 ರ MLC ವರದಿಯಲ್ಲಿ ಸಾಕ್ಷಿಯ ಸಹಿಯನ್ನು ನಿಪಿ.6(ಬಿ) ಎಂದು, ನಿಪಿ.2 ರ ಚಾಸಾ-1 ರವರ ಹೇಳಿಕೆಯಲ್ಲಿ ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು, ನಿಪಿ.7 ರ ಪ್ರ.ವ.ವರದಿಯಲ್ಲಿ ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು.

2. ಅದೇ ದಿನ ಚಾಸಾ-1 ರವರ ಮನೆಯ ಮುಂದೆ ಚಾಸಾ-2 ರವರು ಸ್ಥಳ ತೋರಿಸಿದ ಮೇರೆಗೆ ಪಂಚರಾದ ಚಾಸಾ-5,6 ರವರನ್ನು ಸಂಜೆ 5.00 ರಿಂದ 6 ರವರೆಗೆ ಮಹಜರ್ ಮಾಡಿ, ಚಾಸಾ-2 ರವರು ಹಾಜರುಪಡಿಸಿದ ಚಾಸಾ-1 ರವರ ನೀಲಿ ಬಣ್ಣದ ಚೆಕ್ಸ್ ಷರ್ಟ್, 2 ½ ಅಡಿ ಉದ್ದದ ಒಂದು ದೊಣ್ಣೆ, 2 ½ ಅಡಿ ಉದ್ದದ

ರಿಪೀಸ್ ಪಟ್ಟಿಯನ್ನು ಅಮಾನತ್ತುಪಡಿಸಿಕೊಂಡು, ಸದರಿ ಪಂಚನಾಮೆಗೆ ಚಾಸಾ-5,6 ರವರ ಸಹಿ ಪಡೆದಿರುತ್ತೇನೆ. ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಠಾಣೆಗೆ ತಂದು PF No. 212/2020 ರಲ್ಲಿ ಅಳವಡಿಸಿ, ಮಾನ್ಯ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಿಪಿ.1 ರ ಸ್ಥಳ ಪಂಚನಾಮೆಯಲ್ಲಿ ಸಾಕ್ಷಿಯ ಸಹಿಯನ್ನು ನಿಪಿ.1(ಸಿ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಮು.ಮಾ-1 ರಿಂದ 3 ಅನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

3. ಅದೇ ದಿನ ಚಾಸಾ-2 ರಿಂದ 4 ಹಾಗೂ ಚಾಸಾ-7 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 15.01.2021 ರಂದು 1 ರಿಂದ 4 ನೇ ಆರೋಪಿತರಿಗೆ ಪೊಲೀಸ್ ನೋಟೀಸ್ ಜಾರಿ ಮಾಡಿರುತ್ತೇನೆ. ದಿಃ 09.02.2021 ರಂದು ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ಚಾಸಾ-8 ರವರಿಂದ ಪಡೆದಿರುತ್ತೇನೆ. ಸದರಿ ನಿಪಿ.5 ರ ಗಾಯದ ಪ್ರಮಾಣ ಪತ್ರದಲ್ಲಿ ಸಾಕ್ಷಿಯ ಸಹಿಯನ್ನು ನಿಪಿ.5(ಬಿ) ಎಂದು ಗುರುತಿಸಲಾಯಿತು. ದಿಃ 09.02.2021 ರಂದು ಚಾಸಾ-1 ರವರ ಮುಂದುವರಿದ ಹೇಳಿಕೆಯನ್ನು ಪಡೆದಿರುತ್ತೇನೆ. ಅದೇ ದಿನ ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೇನೆ. ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಉಳಿದ ಆರೋಪಿತರು ಗೈರುಹಾಜರಿದ್ದು, ಆರೋಪಿತರ ಪರ ವಕೀಲರು ಆರೋಪಿತರ ಗುರುತಿನ ಬಗ್ಗೆ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

<u>ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎ.ಕೆ.ವಕೀಲರಿಂದಃ</u>

4. ನಿಪಿ.6 ರಂತೆ ನಾನು ಯಾವುದೇ ಮೆಮೋವನ್ನು ಆಸ್ಪತ್ರೆಯಿಂದ ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ಸದರಿ ಮೆಮೋ ರೀತ್ಯಾ ನಾನು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.7 ರಂತೆ ಚಾಸಾ-1 ರವರ ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ.

5. ಘಟನೆಯು ದಿಃ 27.12.2020 ರಂದು ನಡೆದಿದೆ ಎಂದು ಹೇಳಿದ್ದು, ಹೇಳಿಕೆಯನ್ನು ದಿಃ 29.12.2020 ರಂದು ಪಡೆದಿರುತ್ತೇನೆ ಎಂದು ನುಡಿದಿದ್ದು,

ಸುಳ್ಳಾದ ಪ್ರಕರಣವಾದ ಕಾರಣದಿಂದ ಈ ಬಗ್ಗೆ ಎರಡು ದಿನಗಳು ತಡವಾಗಿ ಹೇಳಿಕೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರು ಕೌನ್ಸೆಲರ್ ಹರೀಶ್ ಅವರ ಮೂಲಕ ವ್ಯಾಜ್ಯವನ್ನು ಬಗ್ಗೆ ಹರಿಸಿಕೊಳ್ಳುತ್ತೇವೆ ಎಂದು ದಿಃ 27.12.2020 ರಂದು ಹೇಳಿಕೆ ನೀಡಲು ಮೌಖಿಕವಾಗಿ ನಿರಾಕರಿಸಿದ್ದರಿಂದ ಆ ದಿನ ಹೇಳಿಕೆ ಮಾಡಿಕೊಂಡಿರಲಿಲ್ಲ ಎಂದು ನುಡಿಯುತ್ತಾರೆ.

6. ಚಾಸಾ–2 ರವರು ತೋರಿಸಿದ ಜಾಗದಲ್ಲಿ ನಾನು ನಿಪಿ.1 ರಂತೆ ಸ್ಥಳ ಮಹಜರ್ ಮಾಡಿದ್ದೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅದು ಸೃಷ್ಟಿತ ದಾಖಲೆ ಎಂದರೆ ಸರಿಯಲ್ಲ. ಚಾಸಾ–2 ರವರು ಚಾಸಾ–1 ರವರವರಿಗೆ ಹೆಂಡತಿಯಾಗಬೇಕು ಎಂದು ನಾನು ತಿಳಿದುಕೊಂಡಿದ್ದೇನೆ. ಚಾಸಾ–2 ರವರು ಚಾಸಾ–1 ರವರ ಹೆಂಡತಿ ಅಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ನಿಜವಾಗಿಯು ಮಹಜರ್ ಮಾಡಿದ್ದೆ ಆಗಿದ್ದಲ್ಲಿ ಈ ವಿಚಾರ ನನಗೆ ತಿಳಿಯುತ್ತಿತ್ತು ಎಂದರೆ ಸರಿಯಲ್ಲ. ನಾನು ಸ್ಥಳದಿಂದ ಮು.ಮಾ–1 ರಿಂದ 3 ರ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಅವುಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.ಚಾಸಾ–2 ರಿಂದ 4 ಹಾಗೂ 7 ರವರ ಹೇಳಿಕೆಗಳನ್ನು ವಾಸ್ತವದಲ್ಲಿ ಪಡೆದುಕೊಂಡಿಲ್ಲ, ಅವುಗಳನ್ನು ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

7. ದಿಃ 09.02.2021 ರಂದು ನಾನು ಸ್ವೀಕರಿಸಿದ್ದೇನೆ ಎನ್ನಲಾದ ನಿಪಿ.5 ರ ಗಾಯದ ಪ್ರಮಾಣ ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯವಿಚಾರಣೆಯಲ್ಲಿ ನುಡಿದಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.
ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.